## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಕೆ. ಅಣ್ಣೇಗೌಡ (ನಿವೃತ್ತಿ) ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿ.ಪಂ.ಇಂ ವಿಭಾಗ, ಅರಕಲಗೂಡು ಇವರ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸುವ ಬಗ್ಗೆ.

ಓದಲಾಗಿದೆ: 1. ಕಾರಣ ಕೇಳುವ ನೋಟಿಸ ಸಂಖ್ಯೆ: ಗ್ರಾಅಪ 27 ಇಎನ್‌ಕ್ಯೂ 2004 ದಿನಾಂಕ: 26-11-2014.

2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 82 ವಿಸೇಬಿ 2004, ದಿನಾಂಕ: 29-06-2004.

3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 82 ವಿಸೇಬಿ 2004, ದಿನಾಂಕ: 23-12-2004.

4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 232 ವಿಸೇಬಿ 2013, ದಿನಾಂಕ: 08-07-2016.

5. ಶ್ರೀ ಕೆ. ಅಣ್ಣೇಗೌಡ ಇವರ ಮನವಿ ದಿ:28-09-2016

-000-

ಪ್ರಸ್ತಾವನೆ:-

ಹಾಸನ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಪಂಚಾಯತ್ ರಾಜ್ ಇಂಜನಿಯರಿಂಗ್ ಉಪವಿಭಾಗ ಜಲಾನಯನ ಇಲಾಖೆ, ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ನಡೆದಿರುವ ಅಕ್ಕಿ ಹಗರಣದ ಬಗ್ಗೆ ಸಿ.ಓ.ಡಿ. ಪೋಲಿಸರು ತನಿಖೆ ಕೈಗೊಂಡು ಸಕ್ಷಮ ನ್ಯಾಯಾಲಯಕ್ಕೆ ವರದಿ ಸಲ್ಲಿಸುವ ಸಂದರ್ಭದಲ್ಲಿ ರಫ್ತುದಾರರು, ಗುರುಬಿನ್ನಿ ರೈಸ್ ಮಿಲ್ ಮಾಲೀಕರು, ಹಾಸನ ಮತ್ತು ಅನುಷ್ಠಾನದ ಅಧಿಕಾರಿಗಳ ವಿರುದ್ಧ ಯಾವುದೇ ಆರೋಪ ದೃಢಪಟ್ಟಿರುವುದಿಲ್ಲವೆಂದು "ಬಿ" ವರದಿಯನ್ನು ಸಲ್ಲಿಸಿದ್ದು ಸದರಿ "ಬಿ" ವರದಿಯನ್ನು ನ್ಯಾಯಾಲಯವು ಅಂಗೀಕರಿಸಿರುತ್ತದೆ. ಮುಂದುವರೆದು ಸದರಿ ಸಿ.ಓಡಿ. ತನಿಖಾ ವರದಿಯಲ್ಲಿ ಈ ಕೆಳಗೆ ಕಾಣಿಸಿದ ಅನುಷ್ಠಾನಾಧಿಕಾರಿಗಳು ಕೇಂದ್ರ ಸರ್ಕಾರದ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ನಿರ್ವಹಿಸುವಾಗ ಅಕ್ಕಿಯನ್ನು ಕೂಲಿ ಆಳುಗಳಿಗೆ ಕೊಡುವಲ್ಲಿ ನಿರ್ಲಕ್ಷತೆ ತೋರಿದ್ದು, ನಾಮಿನಲ್ ರೋಲ್ (ಎನ್.ಎಂ.ಆರ್) ತಯಾರು ಮಾಡಿ ಜಿಲ್ಲಾಧಿಕಾರಿಯವರಿಗೆ ಕಳುಹಿಸುವಲ್ಲಿ ಯೋಜನೆಯಂತೆ ತಯಾರು ಮಾಡಿ ಕಳುಹಿಸದೇ ಇರುವುದರಿಂದ ಕರ್ತವ್ಯಲೋಪವೆಸಗಿದ ಅಧಿಕಾರಿಗಳಿಗೆ ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶದ ಮೂಲಕ ಶ್ರೀ ಕೆ. ಅಣ್ಣೇಗೌಡ (ನಿವೃತ್ತಿ) ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿ.ಪಂ.ಇಂ ವಿಭಾಗ, ಅರಕಲಗೂಡು ರವರನ್ನು ಅಮಾನತ್ತು ಮಾಡಿ ಆದೇಶ ಹೊರಡಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ(3) ರಲ್ಲಿ ಓದಲಾದ ದಿನಾಂಕ: 23-12-2004ರ ಆದೇಶದಲ್ಲಿ ಶ್ರೀ ಕೆ. ಅಣ್ಣೇಗೌಡ (ನಿವೃತ್ತಿ) ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿ.ಪಂ.ಇಂ ವಿಭಾಗ, ಅರಕಲಗೂಡು ಇವರ ಅಮಾನತ್ತು ತೆರವುಗೊಳಿಸಿ ಸೇವೆಗೆ ಮನರ್ ಸ್ಥಾಪಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ದಿನಾಂಕ: 26-11-2014 ರಂದು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಗಳು 1957ರ 12 (1) (ಎ) ರಡಿಯಲ್ಲಿ ಕಾರಣ ಕೇಳುವ ನೋಟಿಸನೊಂದಿಗೆ ದೋಷಾರೋಪಣೆ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ(4) ರಲ್ಲಿ ಓದಲಾದ ದಿನಾಂಕ: 08-07-2016ರ ಆದೇಶದಲ್ಲಿ ಶ್ರೀ ಕೆ. ಅಣ್ಣೇಗೌಡ (ನಿವೃತ್ತಿ) ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿ.ಪಂ.ಇಂ ವಿಭಾಗ, ಅರಕಲಗೂಡು ರವರ ವಿರುದ್ಧ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ಶಿಸ್ತು ಕ್ರಮವನ್ನು ಕೈಬಿಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಶ್ರೀ ಕೆ. ಅಣ್ಣೇಗೌಡ (ನಿವೃತ್ತಿ) ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿ.ಪಂ.ಇಂ ವಿಭಾಗ, ಅರಕಲಗೂಡು ಇವರು ದಿ:28-09-2016ರ ಪತ್ರದಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ ದಿನಾಂಕ: 29-06-2004 ರಿಂದ 23-12-2004 ರವರೆಗೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಲು ಕೋರಿರುತ್ತಾರೆ. ಸದರಿಯವರ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ್ದು, ಶ್ರೀ ಕೆ. ಅಣ್ಣೇಗೌಡ (ನಿವೃತ್ತಿ) ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿ.ಪಂ.ಇಂ ವಿಭಾಗ, ಅರಕಲಗೂಡು ರವರ ವಿರುದ್ಧ ದೋಷಾರೋಪಣ ಪಟ್ಟಿಗೆ ಸಂಬಂಧಿಸಿದಂತೆ, ದಿನಾಂಕ:08-07-2016 ರಂದು ದೋಷಮುಕ್ತಗೊಳಿಸಿ ಆದೇಶಿಸಿರುವುದರಿಂದ ಸದರಿಯವರು ದಿನಾಂಕ:29-06-2004 ರಿಂದ 23-12-2004 ರವರೆಗೆ ಕಳೆದ ಅಮಾನತ್ತು ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು 100(3)ರ ಅನ್ವಯ ಕರ್ತವ್ಯದ ಅವಧಿಯೆಂದು ಪರಿಗಣಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 202 ವಿಸೇಜಿ 2016 ಬೆಂಗಳೂರು ದಿನಾಂಕ:18-01-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಶ್ರೀ ಕೆ. ಅಣ್ಣೇಗೌಡ (ನಿವೃತ್ತಿ) ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿ.ಪಂ.ಇಂ ವಿಭಾಗ, ಅರಕಲಗೂಡು ರವರು ಅಮಾನತ್ತಿನಲ್ಲಿ ಕಳೆದ ದಿನಾಂಕ: 29-06-2004 ರಿಂದ ದಿನಾಂಕ:23-12-2004ರ ವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು 100(3)ರನ್ವಯ ಕರ್ತವ್ಯದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

18/01/2017

(ಎಸ್ ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ.ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ.
3. ಶ್ರೀ ಕೆ. ಅಣ್ಣೇಗೌಡ (ನಿವೃತ್ತಿ) ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.3, ನಾಗರಬಾವಿ ಮುಖ್ಯ ರಸ್ತೆ, ಪ್ರಶಾಂತನಗರ, ಬೆಂಗಳೂರು-79
4. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) /ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
5. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
6. ಮಾಹಿತಿ ಕೇಂದ್ರ / ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ.